ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ.ಎಫ್.ಸಿ. ಹರಿಹರ

ಸಿ.ಸಿ. 27/2016

ಪಿ ಡಬ್ಲ್ಯೂ-10
ಸಿ.ಡಬ್ಲ್ಯೂ14

ಸಾಕ್ಷಿಯ ಹೆಸರುಃ ವಿರುಪಾಕ್ಷಪ್ಪ

ತಂದೆಯ ಹೆಸರುಃ ದೊಡ್ಡಮಲ್ಲಪ್ಪ

ವಯಸ್ಸುಃ 60 ವರ್ಷ

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ಲಕ್ಕೆಟ್ಟಿಹಳ್ಳಿ

ಸಾಕ್ಷಿಯನ್ನು ದಿನಾಂಕ 30.01.2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಬಿಯೋಜಕರಿಂದ

ಆರೋಪಿ ಪರಿಚಯ ಇರುತ್ತಾನೆ. ಸುಮಾರು 9 ವರ್ಷದ ಹಿಂದೆ ನಾನು ಭತ್ತ ಬೆಳೆದಿದ್ದೆ. ಸದರಿ ಭತ್ತವನ್ನು ಆರೋಪಿಯ ಜೊತೆಗೆ ಮಾರಾಟ ಮಾತನಾಡಿ ಶ್ರೀನಿವಾಸ್ ಮಿಲ್ಗೆ ಮಾರಾಟ ಮಾಡಿರುತ್ತೇನೆ. 1,340/- ರೂಗಳಂತೆ 195 ಚೀಲ ಭತ್ತವನ್ನು ಆರೋಪಿಗೆ ಕೊಟ್ಟಿರುತ್ತೇನೆ. ಒಟ್ಟು ಮೊತ್ತ 2 ಲಕ್ಷದ 8 ಸಾವಿರ ಚಿಲ್ಲರೆ ಆಗಿದ್ದು, ಸದರಿ ಮೊತ್ತವನ್ನು ಒಂದು ತಿಂಗಳಲ್ಲಿ ಕೊಡುತ್ತೇನೆ ಎಂದು ಹೇಳಿದ್ದ. ಸದರಿ ಭತ್ತದ ಚೀಲವನ್ನು ಶ್ರೀನಿವಾಸ್ ಮಿಲ್ನಲ್ಲಿ ಕೊಟ್ಟು ಬಂದಿರುತ್ತೇನೆ. ಅವರು ಯಾವುದೇ ಹಣವನ್ನು ನನಗೆ ಕೊಟ್ಟಿಲ್ಲ. ನಂತರ ನಾವು ಆರೋಪಿ ಮನೆಗೆ ಹಣ ಕೇಳಲು ಹೋಗಿರುತ್ತೇವೆ ಆಗ ಅವನು ಮನೆಯಲ್ಲಿ ಇರಲಿಲ್ಲ ಮರುದಿನ ಅವನು ಎಲ್ಲೋ ಹೋಗಿರುತ್ತಾನೆಂದು ಗೊತ್ತಾಗಿರುತ್ತದೆ. ಮತ್ತೆ ಆರೋಪಿ ನಮಗೆ ಯಾವತ್ತೂ ಸಿಕ್ಕಿಲ್ಲ. ಆರೋಪಿ ನಮಗೆ ಮೋಸ ಮಾಡಿರುತ್ತಾನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾನೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಆರ್ ಪಿ. **ವಕೀಲರಿಂದ**

ಆರೋಪಿಗೂ ಶ್ರೀನಿವಾಸ ರೈಸ್ ಮಿಲ್ ಗೂ ಯಾವುದೇ ಸಂಬಂಧ ಇಲ್ಲ ಎಂದರೆ ನಿಜ. ಸದರಿ ನಾನು ನಮ್ಮ ಭತ್ತದ ಲೋಡಿನ ಜೊತೆಯಲ್ಲಿ ನನ್ನ ಮಗ ಪರವೀಣ್ ಅವರನ್ನು ಶ್ರೀನಿವಾಸ ರೈಸ್ ಮಿಲ್ ಗೆ ಕಳುಹಿಸಿ 195 ಚೀಲ ಭತ್ತವನ್ನು ರೈಸ್ ಮಿಲ್‌ನಲ್ಲಿದ್ದ ರೈಸ್ ಮಿಲ್ ಮಾಲಿಕರಾದ ನಾಗೇಶ್ವರ್ ರಾವ್ ಹಾಗೂ ಆರೋಪಿ ಬಸವರಾಜ್ ಇವರ ಸಮಕ್ಷಮ ನೀಟ್ ಹಾಕಿಸಿರುತ್ತೇನೆ. 4 ಮೂಲೆಗಳಲ್ಲಿ ವಿ.ಎಲ್ ಎಂದು ಹಸಿರು ಬಣ್ಣದಿಂದ ಗುರುತು ಮಾಡಿರುತ್ತದೆ ಎಂದು ಪೋಲೀಸರಿಗೆ ನಾನು ಹೇಳಿಕೆಯಲ್ಲಿ ಹೇಳಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ 1 ಎಂದು ಗುರುತಿಸಲಾಯಿತು. ನನ್ನಂತೆ ಕುಣೆಬೆಳಕರೆ ಗ್ರಾಮದ ಬೆಳಕೆರೆಪ್ಪ ಕ್ವಿಂಟಾಲ್ ಒಂದಕ್ಕೆ 1100 ರೂ ನಂತೆ ಮಾತನಾಡಿ ಇವರ ಬಾಬ್ತು 144 ಚೀಲ ತೂಕ 116 -50 ಕ್ವಿಂಟಾಲ್ ಭತ್ತವನ್ನು ಮಾರಾಟ ಮಾಡಿದ ಹಣ 1,29,000/- ರೂ ಹಾಗೂ ರೇವಣಸಿದ್ದಪ್ಪನ

ಸಿ.ಸಿ. 27/2016

ಪಿ ಡಬ್ಲ್ಯೂ-10

ಸಿ.ಡಬ್ಲ್ಯೂ14

ಬಾಬ್ತು 126 ಚೀಲ 105-05 ಕ್ವಿಂಟಾಲ್ ಭತ್ತವನ್ನು ಮಾರಾ ಮಾಡಿದ ಹಣ 1,10,000/- ರೂಗಳಾಗಿದ್ದು ಹಾಗೂ ಕೋಲ್ಕಾ ಕರಿಬಸಪ್ಪ ಇವರು ಸಹ ಕ್ವಿಂಟಾಲ್ ಒಂದಕ್ಕೆ 1150 ರೂ ನಂತೆ ಮಾತನಾಡಿ ನಮ್ಮ ಬಾಬ್ತು 260 ಚೀಲ ತೂಕ 195 ಕ್ವಿಂಟಾಲ್ ಭತ್ತವನ್ನು ಬಸವರಾಜಯ್ಯ ಇವರಿಗೆ ಮಾರಾಟ ಮಾಡಿದ್ದು ಎಂದು ಪೋಲೀಸರಿಗೆ ನಾನು ಹೇಳಿಕೆಯನ್ನು ಕೊಟ್ಟಿಲ್ಲ . ಸದರಿ ಹೇಳಿಕೆಯ ಭಾಗವನ್ನು ನಿಡಿ 1(ಎ) ಎಂದು ಗುರುತಿಸಲಾಯಿತು. ಶ್ರೀನಿವಾಸ್ ರೈಸ್ ಮಿಲ್ ನ ಮಾಲಿಕರು ಯಾರು ಎಂದು ಮಾಹಿತಿ ತೆಗೆದುಕೊಂಡಿಲ್ಲ. ಆರೋಪಿ ನಮ್ಮಭತ್ತವನ್ನು ಖರೀದಿ ಮಾಡಿರುತ್ತಾನೆ ಎನ್ನುವುದಕ್ಕೆ ರಸೀದಿಯನ್ನು ಇಟ್ಟುಕೊಂಡಿಲ್ಲ. ಸಾಮಾನ್ಯವಾಗಿ ರೈತರು ಕೃಷಿ ಉತ್ಪನ್ನ ಮಾರುಕಟ್ಟೆಯ ಮೂಲಕ ಭತ್ತವನ್ನು ಮಾರಾಟ ಮಾಡುತ್ತಾರೆ ಎಂದರೆ ನಿಜ. ಕೃಷಿ ಉತ್ಪನ್ನ ಮಾರುಕಟ್ಟೆಯ ಮೂಲಕ ಭತ್ತವನ್ನು ಮಾರಾಟ ಮಾಡುವಾಗ ಯಾರಿಗೆ ಲೈಸೆನ್ಸ್ ಇರುತ್ತದೆಯೋ ಅಂತಹವರಿಗೆ ಮಾರಾಟ ಮಾಡಲು ತಿಳಿಸುತ್ತಾರೆ ಎಂದರೆ ನಿಜ. ಆರೋಪಿ ಯಾವುದೇ ಲೈಸನ್ಸ್ ಪಡೆದುಕೊಂಡಿಲ್ಲ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಶ್ರೀನಿವಾಸ್ ರೈಸ್ ಮಿಲ್ ನ ಭತ್ತವನ್ನು ಕೊಟ್ಟಿದ್ದು ಆರೋಪಿಗೆ ಯಾವುದೇ ಭತ್ತವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನೇ ಖುದ್ದಾಗಿ ಶ್ರೀನಿವಾಸ್ ರೈಸ್ ಮಿಲ್ ಗೆ ಭತ್ತವನ್ನು ಇಳಿಸಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶ್ರೀನಿವಾಸ್ ರೈಸ್ ಮಿಲ್ ನ ಮಾಲಕರು ನಾನು ಹಾಗೂ ಉಳಿದ ರೈತರು ಸೇರಿ ಆರೋಪಿ ಯಾವುದೇ ಭತ್ತ ಖರೀದಿ ಮಾಡದೇ ಇದ್ದರೂ ಸಹ ಖರೀದಿ ಮಾಡಿ ಹಣ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಬಳಿ ಯಾವಾಗಲೂ ಬಂದಿಲ್ಲ ಮತ್ತು ಯಾವುದೇ ಭತ್ತ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ.ಆರೋಪಿ ನಮಗೆ ಯಾವುದೇ ಹಣ ಕೊಡಲು ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ಆರೋಪಿ ನಮಗೆ ಯಾವುದೇ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

-

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಹರಿಹರ